## ನೀನಾಸಮ್ ತಿರುಗಾಟ

೧೯೮೫ರಲ್ಲಿ ಪ್ರಾರಂಭವಾದ ತಿರುಗಾಟ ಯೋಜನೆ ೩೩ ವರ್ಷಗಳನ್ನು ಪೂರೈಸಿ ೩೪ನೆಯ  ವರ್ಷದಲ್ಲಿ ಕಾಲಿಡುತ್ತಿದೆ.

- ಈ ವರ್ಷಗಳಲ್ಲಿ ತಿರುಗಾಟ ಒಟ್ಟು ೯೯ ಪ್ರಯೋಗಗಳನ್ನು ಸಿದ್ಧಪಡಿಸಿದೆ. ಇದರಲ್ಲಿ ಕನ್ನಡದ ಮೂಲ ನಾಟಕಗಳು ೩೪, ಕನ್ನಡದ ಕೃತಿಗಳ ರೂಪಾಂತರಗಳು ೮, ಭಾರತೀಯ ನಾಟಕಗಳು ೨೫, ಪಾಶ್ಚಾತ್ಯ ಅನುವಾದ-ರೂಪಾಂತರಗಳು ೩೨
- ಈವರೆಗೆ ಸುಮಾರು ೩೮೪ ಜನ ನಟ-ತಂತ್ರಜ್ಞರು ತಿರುಗಾಟದಲ್ಲಿ ಕೆಲಸ ಮಾಡಿದ್ದಾರೆ. ಕರ್ನಾಟಕದ ಎಲ್ಲ ಜಿಲ್ಲೆಯವರೂ ಕೂಡಿಕೊಂಡಿರುವ ಈ ಗುಂಪಿನಲ್ಲಿ ಬಹುಪಾಲು ಜನರು ನೀನಾಸಮ್ ರಂಗಶಿಕ್ಷಣ ಕೇಂದ್ರದಿಂದ ತರಬೇತಿ ಪಡೆದವರು.
- ಈ ವರ್ಷಗಳಲ್ಲಿ ತಿರುಗಾಟವು ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ಕೂಡಿ ಒಟ್ಟು ೨೭೬ಕ್ಕೂ ಹೆಚ್ಚು ಊರುಗಳಲ್ಲಿ ಪ್ರದರ್ಶನ ನೀಡಿದೆ. ಇದರಲ್ಲಿ ಶೇಕಡಾ ೭೫ರಷ್ಟು ಊರುಗಳು ತಾಲ್ಲೂಕು ಕೇಂದ್ರ ಅಥವಾ ಅದಕ್ಕಿಂತ ಸಣ್ಣವು.
- ಈ ವರ್ಷಗಳಲ್ಲಿ ತಿರುಗಾಟವು ಕರ್ನಾಟಕದ ಎಲ್ಲ ಜಿಲ್ಲೆಗಳೂ ಸೇರಿ ಒಟ್ಟು ೩.೫೨,೭೦೦ ಲಕ್ಷ ಕಿ.ಮಿ.ಗಳಿಗೂ ಹೆಚ್ಚು ಪ್ರವಾಸ ಮಾಡಿ ಸುಮಾರು ೪,೯೭ ಪ್ರದರ್ಶನಗಳನ್ನು ಕೊಟ್ಟಿದೆ. ಇದುವರೆಗೆ ತಿರುಗಾಟ ಪ್ರದರ್ಶನಗಳನ್ನು ವೀಕ್ಷಿಸಿದ ಅಂದಾಜು ಪ್ರೇಕ್ಷಕರ ಸಂಖ್ಯೆ ೨೩,೮೩,೦೫೦ ಲಕ್ಷಕ್ಕೂ ಹೆಚ್ಚು. ಇದರಲ್ಲಿ ಸುಮಾರು ಶೇ. ೮೦ರಷ್ಟು ಜನ ತಾಲ್ಲೂಕು ಕೇಂದ್ರ ಅಥವಾ ಅದಕ್ಕಿಂತ ಸಣ್ಣ ಊರಿನವರು.
- ಈವರೆಗೆ ತಿರುಗಾಟ ತಂಡುವು ಪ್ರದರ್ಶಿಸಿದ ಎಲ್ಲ ನಾಟಕ ಪ್ರಯೋಗಗಳಿಗೆ ಕರ್ನಾಟಕದಾದ್ಯಂತ ತುಂಬ ಒಳ್ಳೆಯ ಪ್ರೇಕ್ಷಕಸ್ಪಂದನೆಯೂ ವಿಮರ್ಶಾ ಪ್ರತಿಕ್ರಿಯೆಯೂ ವ್ಯಕ್ತವಾಗಿದೆ. ಅಪರೂಪಕ್ಕೆ ಕೆಲವೊಮ್ಮೆ ತಿರುಗಾಟ ತಂಡವು ರಾಜ್ಯದ ಹೊರಗಿನ ಪ್ರತಿಷ್ಠಿತ ರಂಗ ಉತ್ಸವಗಳಲ್ಲೂ ಪಾಲ್ಗೊಂಡಿದೆ.
- ತಿರುಗಾಟವು ಈವರೆಗೂ ತನ್ನ ಖರ್ಚಿನ ಗಣನೀಯ ಪಾಲನ್ನು ಪ್ರೇಕ್ಷಕರಿಂದ ಬರುವ ಹಣದಿಂದಲೇ ನಿಭಾಯಿಸಿಕೊಳ್ಳುತ್ತಿದೆ.

ಕರ್ನಾಟಕದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತರಾದ ಸಂಸ್ಥೆಗಳು, ಸಾರ್ವಜನಿಕರು, ಪತ್ರಿಕೆಗಳು ಹಾಗೂ ಪ್ರೇಕ್ಷಕರಿಂದ ಕಳೆದ ವರ್ಷಗಳಲ್ಲಿ ಸಿಕ್ಕ ಸಹಾಯ ಸಹಕಾರಗಳನ್ನು ಈ ವರ್ಷದ ತಿರುಗಾಟವೂ ಕೂಡಾ ಕೃತಜ್ಞತೆಯಿಂದ ಎದುರು ನೋಡುತ್ತದೆ.

## ಈ ವರ್ಷದ ತಿರುಗಾಟ ನಾಟಕಗಳು

**೧. ಸೇತುಬಂಧನ**

**ನಿರ್ದೇಶನ: ಅಕ್ಷರ ಕೆ.ವಿ.**

ಅಕ್ಷರ ಕೆ.ವಿ. ಅವರ ಸ್ವಯಂವರಲೋಕ ಮತ್ತು ಭಾರತಯಾತ್ರೆ ನಾಟಕಗಳ ಮೂರನೆಯ ಭಾಗವಾಗಿ ರಚಿತವಾಗಿರುವ – ಆದರೆ ಸ್ವತಂತ್ರ ನಾಟಕವಾಗಿಯೂ ನೋಡಬಹುದಾದ – ಈ ನಾಟಕವು ಇವತ್ತಿನ ಗ್ರಾಮಭಾರತದ ಹಲವು ವಾಸ್ತವಗಳನ್ನು ನಿರ್ದಿಷ್ಟ ಸಾಮಾಜಿಕ-ಭೌಗೋಲಿಕ ಸಂದರ್ಭದಲ್ಲಿ ಸ್ಥಿತವಾದ ಒಂದು ಕುಟುಂಬದ ಬದುಕಿನ ಸುತ್ತ ಕಟ್ಟುತ್ತದೆ. ಸಮಕಾಲೀನ ಜಗತ್ತಿನ ವಾಸ್ತವದ ಬಿಂಬಗಳನ್ನು ಕಾಣಿಸುತ್ತಲೇ, ಅದಕ್ಕಿಂತ ವಿಶಾಲವಾದ ಬದುಕಿನ ಕಾಣ್ಕೆಗಳನ್ನು ಕಾಣುವ ಹಂಬಲ ಈ ನಾಟಕದ ಹಿಂದಿದೆ.

**೨. ಆಶ್ಚರ್ಯಚೂಡಾಮಣಿ**

**ನಿರ್ದೇಶನ: ಜೋಸೆಫ್ ಜಾನ್**

ಕ್ರಿ.ಶ. ೯-೧೦ನೆಯ ಶತಮಾನದ ಶಕ್ತಿಭದ್ರನ ಈ ನಾಟಕವು ಬಾಲಕಾಂಡವೊಂದನ್ನು ಬಿಟ್ಟು ಉಳಿದ ರಾಮಾಯಣಕಥೆಯನ್ನು ಅಡಕಗೊಳಿಸಿ ಹೇಳುತ್ತದೆ. ಆದರೆ, ಈ ಕಥೆಯು ರಾಮಾಯಣದ ಸಾಂಪ್ರದಾಯಿಕ ಕಥನಗಳನ್ನು ತುಂಬ ವಿಭಿನ್ನವಾಗಿ ಪುನರ್ ನಿರೂಪಿಸುವ ಮೂಲಕ ಮಾಯಾವಾಸ್ತವದ ಹೊಸ ದಾರಿಯೊಂದನ್ನು ಅನಾವರಣಗೊಳಿಸುವಂತಿದೆ. ಕೇರಳದ ಸಾಂಪ್ರದಾಯಿಕ ರಂಗಭೂಮಿಗಳಿಗೆ ಆಪ್ತವಾದ ಈ ಪಠ್ಯವನ್ನು ಹೊಸ ಬಗೆಯ ಆಂಗಿಕಾಭಿನಯ ಮತ್ತು ಸಾತ್ವಿಕಾಭಿನಯಗಳ ಸಂಯೋಜನೆಯ ಮೂಲಕ ಪ್ರಸ್ತುತಪಡಿಸುವ ಪ್ರಯೋಗ ಇಲ್ಲಿದೆ.

## ತಿರುಗಾಟ ೨೦೧೮ಯೋಜನೆ

ತಿರುಗಾಟ ಕಾರ್ಯಕ್ರಮವು ಜುಲೈ ೨೦೧೮ ಮತ್ತು ಜನವರಿ ೨೦೧೯ರ ನಡುವೆ ನಡೆಯಲಿದ್ದು ಅದು ಸ್ಥೂಲವಾಗಿ ಹಿಂದಿನ ತಿರುಗಾಟಗಳ ಮಾದರಿಯಲ್ಲೇ ಇರುತ್ತದೆ. ಅಂದರೆ, ಜುಲೈನಿಂದ ಅಕ್ಟೋಬರ್‌ವರೆಗೆ ಎರಡು ನಾಟಕಗಳ ಸಿದ್ಧತೆ; ಆಮೇಲೆ ವಿವಿಧ ಭಾಗಗಳಲ್ಲಿ ಈ ನಾಟಕಗಳ ಪ್ರದರ್ಶನ – ಇದು ತಿರುಗಾಟದ ಕಾರ್ಯಕ್ರಮ. ಈ ಬಾರಿಯ ತಿರುಗಾಟವು ಎರಡು ನಾಟಕಗಳನ್ನು ಮಾತ್ರ ಸಿದ್ಧಪಡಿಸಿಕೊಂಡು ತನ್ನ ಪ್ರದರ್ಶನಗಳನ್ನು ಕರ್ನಾಟಕದ ೫೦ ಊರುಗಳಿಗೆ, ಅಂದರೆ ಒಟ್ಟು ೧೦೦ ಪ್ರದರ್ಶನಗಳಿಗೆ ಮಾತ್ರ, ಸೀಮಿತಗೊಳಿಸಿಕೊಳ್ಳುತ್ತದೆ.

**ಅಕ್ಟೋಬರ್ ೨೦೧೮-ಜನವರಿ ೨೦೧೯ನಡುವಿನ ತನ್ನ ಪ್ರವಾಸ ಮತ್ತು ಪ್ರದರ್ಶನಕ್ಕೆ ನೀನಾಸಮ್ ತಿರುಗಾಟವು ಕರ್ನಾಟಕದ ಎಲ್ಲ ಭಾಗಗಳ ಆಸಕ್ತ ಸಾಂಸ್ಕೃತಿಕ ಸಂಸ್ಥೆಗಳಿಂದ ಆಹ್ವಾನಗಳನ್ನು ನಿರೀಕ್ಷಿಸುತ್ತಿದೆ.**

ಪ್ರದರ್ಶನ ಏರ್ಪಡಿಸಲು ಇಚ್ಛಿಸುವವರಿಗೆ ಅಗತ್ಯವಾದ ಸೂಚನೆಗಳು ಹಿಂಬದಿಗಿವೆ. ದಯಮಾಡಿ ಗಮನಿಸಿ.

## ತಿರುಗಾಟದ ಪ್ರದರ್ಶನಗಳನ್ನು ಏರ್ಪಡಿಸಬಯಸುವ ವ್ಯವಸ್ಥಾಪಕರಿಗೆ ಸೂಚನೆಗಳು

- ☐ ಕನಿಷ್ಠ ೩೦ ಅಡಿ ಅಗಲ, ೨೦ ಅಡಿ ಆಳದ ರಂಗವೇದಿಕೆ ಇರುವ, ವಿದ್ಯುತ್ ಮತ್ತು ರಸ್ತೆಯ ಸೌಲಭ್ಯವಿರುವ ಯಾವುದೇ ಊರಿನಲ್ಲಾದರೂ ನಮ್ಮ ನಾಟಕಗಳನ್ನು ಆಡಬಹುದು.
- ☐ ಆಯಾ ಊರಿನ ರಂಗಮಂದಿರ, ಪ್ರಚಾರ, ಪ್ರದರ್ಶನ ದಿನಗಳಲ್ಲಿನ ಊಟ, ವಸತಿ, ವಿದ್ಯುಚ್ಛಕ್ತಿ, ಲೈಸೆನ್ಸ್ – ಇವಿಷ್ಟು ಆಯಾ ವ್ಯವಸ್ಥಾಪಕ ಸಂಸ್ಥೆಯ ಜವಾಬ್ದಾರಿ.
- ☐ ನಮ್ಮ ಪ್ರಯಾಣ, ಪ್ರದರ್ಶನಕ್ಕೆ ಬೇಕಾದ ಹೆಚ್ಚಿನ ಎಲ್ಲಾ ಸಲಕರಣೆಗಳು, ದೀಪದ ವ್ಯವಸ್ಥೆ, ಧ್ವನಿವ್ಯವಸ್ಥೆ ಮತ್ತು ನಾಟಕಗಳಿಗೆ ಸಂಬಂಧಿಸಿದ ಸಾಮಗ್ರಿಗಳು – ಇವುಗಳ ಹೊಣೆ ನಮ್ಮದು.
- ☐ ತಿರುಗಾಟವು ಯಾವುದೇ ಸ್ಥಳದಲ್ಲೂ ಕೇವಲ ಒಂದು ಪ್ರದರ್ಶನ ಕೊಡುವುದಿಲ್ಲ. **ಯಾವುದೇ ಊರಿನಲ್ಲಿ ಒಂದೇ ಸ್ಥಳದಲ್ಲಿ ಈ ತಿರುಗಾಟದ ಎರಡೂ ನಾಟಕಗಳನ್ನು ಏರ್ಪಡಿಸುವುದು ಅಗತ್ಯ.** ಅಗತ್ಯವೆನಿಸಿದರೆ ಒಂದೇ ಊರಿನ ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ಕೂಡಿ ಎರಡು ಪ್ರದರ್ಶನಗಳನ್ನು ಮಾಡಿಸಬಹುದು.
- ☐ ಒಂದು ದಿನ ಒಂದು ಪ್ರದರ್ಶನ ಮಾತ್ರ ಸಾಧ್ಯವಿದ್ದು ಅದು ಸಂಜೆ ೭ರಿಂದ ೭.೩೦ರ ನಡುವೆ ಆರಂಭವಾಗುವುದು ಅಗತ್ಯ. ತಡರಾತ್ರಿಯ ಪ್ರದರ್ಶನಗಳನ್ನು ನಾವು ಮಾಡುವುದಿಲ್ಲ.
- ☐ ಪ್ರದರ್ಶನಗಳ ನಮ್ಮ ಎಲ್ಲ ಖರ್ಚುಗಳಿಗಾಗಿ ವ್ಯವಸ್ಥಾಪಕ ಸಂಸ್ಥೆಯು ನಮಗೆ ಕೊಡಬೇಕಾದ ಹಣ – **ಎರಡು ಪ್ರದರ್ಶನಗಳಿಗೆ ರೂ. ೨೮,೦೦೦.**
- ☐ ಈ ಮೊಬಲಗು ಕರ್ನಾಟಕದೊಳಗೆ ಸಾಂಸ್ಕೃತಿಕ ಸ್ವಯಂಸೇವಾ ಸಂಸ್ಥೆಗಳು ಏರ್ಪಡಿಸುವ ಪ್ರದರ್ಶನಗಳಿಗೆ ಮಾತ್ರ ಅನ್ವಯವಾಗುತ್ತದೆ. ಸರ್ಕಾರಿ, ಅರೆಸರ್ಕಾರಿ ಮತ್ತು ಉದ್ಯಮ ಸಂಸ್ಥೆಗಳು ಏರ್ಪಡಿಸುವ ಯಾವುದೇ ಪ್ರದರ್ಶನಗಳಿಗೆ ಈ ದರ ಅನ್ವಯಿಸುವುದಿಲ್ಲ.
- ☐ ತಿರುಗಾಟವು ಸಾಧಾರಣವಾಗಿ ಕರ್ನಾಟಕದ ಹೊರಗೆ ಪ್ರದರ್ಶನ ಕೊಡುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೊಡಲಾಗುವ ಹೊರರಾಜ್ಯದ ಪ್ರದರ್ಶನಗಳಿಗೆ ಖರ್ಚು ವೆಚ್ಚದ ವಿವರಗಳನ್ನು ನಮಗೆ ಬರೆದು ಪಡೆಯಬಹುದು.
- ☐ ತಿರುಗಾಟ ಪ್ರದರ್ಶನಗಳು ಸರಣಿಯಲ್ಲಿ ಯೋಜಿತವಾಗುತ್ತವೆ. ಆ ಸರಣಿಯಲ್ಲಿ ನಿಮ್ಮ ಊರಿನ ಸಮೀಪ ತಿರುಗಾಟ ಬಂದಾಗಲೇ ನಿಮ್ಮ ಊರಿನಲ್ಲಿ ಪ್ರದರ್ಶನ ಸಾಧ್ಯ. **ವಾರಕ್ಕೆ ಮತ್ತು ತಾರೀಖಿಗೆ ಸಂಬಂಧಿಸಿದ ನಿಮ್ಮ ಅನುಕೂಲತೆ ಏನಾದರೂ ಇದ್ದರೆ ಅದಕ್ಕೆ ಹೊಂದಿಸಲು ಪ್ರಯತ್ನಿಸಬಹುದೇ ವಿನಃ ಅಂತಿಮವಾಗಿ ತಿರುಗಾಟವು ಸೂಚಿಸುವ ವಾರ ಮತ್ತು ತಾರೀಖುಗಳಿಗೇ ನೀವು ಒಪ್ಪಿಕೊಳ್ಳಬೇಕಾಗುತ್ತದೆ** ಎಂಬುದನ್ನು ದಯವಿಟ್ಟು ಗಮನಿಸಬೇಕು.
- ☐ ದಯವಿಟ್ಟು ಜತೆಗಿರುವ ಆಹ್ವಾನಪತ್ರ ತುಂಬಿಸಿ ಕಳಿಸಿ. ಅಥವಾ ಬರೆಯಿರಿ. ಪ್ರದರ್ಶನಗಳನ್ನು ಸರಣಿಯಲ್ಲಿ ಯೋಜಿಸಬೇಕಾಗಿರುವುದರಿಂದ ನಿಮ್ಮ ಆಹ್ವಾನ ಪತ್ರವು ನಮಗೆ **೨೦೧೮ಆಗಸ್ಟ್ ಕೊನೆಯೊಳಗೆ** ತಲುಪಬೇಕು. ಆಮೇಲೆ ನಮ್ಮ ವ್ಯವಸ್ಥಾಪಕರು ನಿಮ್ಮನ್ನು ದೂರವಾಣಿ ಮೂಲಕ ಸಂಪರ್ಕಿಸಿ ದಿನಾಂಕ ಮತ್ತಿತರ ವಿವರಗಳನ್ನು ನಿಶ್ಚಿತಗೊಳಿಸುತ್ತಾರೆ.
- ☐ ತಿರುಗಾಟದ ದಿನಾಂಕ ನಿಶ್ಚಿತವಾದೊಡನೆ ನಿಮಗೆ ವಿವರಗಳ ಸಮೇತ ಕಾಗದ ಬರೆಯಲಾಗುತ್ತದೆ. ಆ ಪತ್ರಕ್ಕೆ ವ್ಯವಸ್ಥಾಪಕ ಸಂಸ್ಥೆಯು ಒಪ್ಪಿ ಸಮ್ಮತಿಯನ್ನು ನಿಗದಿತ ವೇಳೆಯೊಳಗೆ ಕಳುಹಿಸಬೇಕು. ಮತ್ತು **ರೂ. ೫,೦೦೦ ಮುಂಗಡವನ್ನು ಕೊಟ್ಟು ಪ್ರದರ್ಶನವನ್ನು ನಿಶ್ಚಯಿಸಬೇಕು.** ಮುಂಗಡ ಹಣ ಪಾವತಿ ಮಾಡದೆ ಇದ್ದರೆ, ಪ್ರದರ್ಶನವನ್ನು ರದ್ದುಗೊಳಿಸಲಾಗುತ್ತದೆ.

# ಪ್ರಕಟಣೆ

**ನೀನಾಸಮ್ ತಿರುಗಾಟ ೨೦೧೮**
ಹೆಗ್ಗೋಡು ಸಾಗರ ಕರ್ನಾಟಕ
೫೭೭ ೪೧೭
ದೂರವಾಣಿ: ೦೮೧೮೩ - ೨೬೫೬೪೬
ಶ್ರೀಕಾಂತ: ೯೪೪೯೩-೩೭೨೫೦
Website: www.ninasam.org
email: tirugata@ninasam.org